ಶ್ರೀ ಎಚ್. ಎಲ್. ಶಿವಮ್ಮೇಗೌಡ.—ಅದು ಸೆಂಟ್ರಲ್ ಸ್ಕೀಮ್ ಇರತಕ್ಕದ್ದು. ಪ್ರೈವೇಟ್ ಆಸೋಸಿಯೇಷನ್‌ನವರು ಈ ಬಗ್ಗೆ ಮುಂದೆ ಬಂದರೆ ಕೇಂದ್ರದವರು, ರಾಜ್ಯದವರು ಹಾಗೂ ಆ ಅಸೋಸಿಯೇಷನ್‌ನವರು ಮೂವರೂ ಮೂರನೇ ಒಂದು ಭಾಗದಷ್ಟು ಹಣ ಹಾಕಿಕೊಳ್ಳಬೇಕೆಂದು ಇದೆ. ಈ ಸಹಾಯವನ್ನು ರಾಜ್ಯ ಸರ್ಕಾರ ಕಟ್ಟುವಂತಹದಕ್ಕೆ ಕೊಡುವುದಿಲ್ಲ. ಈ ಯೋಜನೆ ಲಾಭ ಉಪಯೋಗಿಸಿಕೊಳ್ಳಬೇಕೆಂದು ನಾವು ಹೆಚ್ಚು ಪ್ರಚಾರವನ್ನು ಕೊಟ್ಟಿದ್ದೇವೆ. ಆ ಬಗ್ಗೆ ಪ್ರಿಂಟ್ ಮಾಡಿ ಹಂಚಿದ್ದೇವೆ. ದುರಾದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ೨ ಸಂಸ್ಥೆಗಳು ಮಾತ್ರ ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಐತಿಹಾಸಿಕ ಸ್ಮಾರಕಗಳನ್ನು ಉಳಿಸಿಕೊಳ್ಳುವುದು

೫೨೩. ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಾರ್ತಾ, ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಹೊಸನಗರ ತಾಲ್ಲೂಕಿನ ನಗರದ ಶಿವಪ್ಪನಾಯಕನ ಅರಮನೆ ಮತ್ತು ಕೋಟೆಯನ್ನು ಐತಿಹಾಸಿಕ ದಾಖಲೆಗಾಗಿ ಉಳಿಸಿಕೊಳ್ಳುವ ಬಗ್ಗೆ ಸರ್ಕಾರದವರು ನಿರ್ಧರಿಸಿದ್ದಾರೆಯೆ, ಹಾಗಿದ್ದಲ್ಲಿ ಆ ಬಗ್ಗೆ ಈವರೆಗೂ ಕೈಗೊಂಡಿರುವ ಕ್ರಮಗಳೇನು,

(ಆ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದಿರುವ ಸ್ಥಳಗಳನ್ನು ಗುರುತಿಸಲಾಗಿದೆಯೇ, ಹಾಗಿದ್ದಲ್ಲಿ ಅವುಗಳ ಹೆಸರುಗಳೇನು ಹಾಗೂ ಅವುಗಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳೇನು,

ಶ್ರೀ ಜೀವರಾಜ ಆಳ್ವ (ವಾರ್ತಾ, ಯುವಜನಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು).—

(ಅ) ಹೊಸನಗರ ತಾಲ್ಲೂಕಿನ ನಗರದಲ್ಲಿಯ ಶಿವಪ್ಪನಾಯ್ಕನ ಅರಮನೆ ಮತ್ತು ಕೋಟೆ ಸರ್ವೇಕ್ಷಣೆಯನ್ನು ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವೃತ್ತವು ಸಂರಕ್ಷಿಸುತ್ತಿದೆ. ಇವುಗಳ ರಕ್ಷಣೆಗೋಸ್ಕರ ಆಗಾಗ್ಗೆ ದುರಸ್ತಿ ಕಾರ್ಯವನ್ನು ಕೈಗೊಂಡಿದ್ದಾರೆ. ಇದಲ್ಲದೆ ಅವುಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಸಿಬ್ಬಂದಿ ವರ್ಗದವರನ್ನು ನಗರದಲ್ಲಿ ಇಟ್ಟಿದ್ದಾರೆ.

(ಆ) ಹೌದು, ಇಲಾಖೆಯು ಐತಿಹಾಸಿಕ ಸ್ಮಾರಕಗಳನ್ನು ರಕ್ಷಿಸುವ ಸಲುವಾಗಿ ಹಂತಗಳಲ್ಲಿ ಕಾರ್ಯಕ್ರಮ ಹಾಕಿಕೊಂಡಿ ಅವುಗಳಲ್ಲಿ ಈ ಕೆಳಕಂಡ ಮುಖ್ಯ ಸ್ಮಾರಕಗಳು ಸೇರಿವೆ.—

ಹೊಸನಗರ ತಾಲ್ಲೂಕು.—

ನಿಲಸುಂಕಲ್, ಬಂಗ್ಲೇಗದ್ದೆ, ಹುಂಜ, ಹೊಸನಗರ, ಬೇಲೂರು, ಹಳೇತೋಟ, ಕೀಳಂದೂರು, ನೈತಾಲ್, ಬಸವಾಪುರ, ಬೆಸಗೆ, ಸಾಲಗೇರಿ, ನಗರ.

ತೀರ್ಥಹಳ್ಳಿ ತಾಲ್ಲೂಕು.—

ಎಡೆಗುಡ್ಡೆ, ಆರಗ, ಅರೇಹಳ್ಳಿ, ಕೋಡ್ಲು, ಮೇಳಿಗೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಚಾರಿತ್ರಿಕ ಪ್ರಾಮುಖ್ಯತೆ ಇರುವ ಈ ಕೇಂದ್ರಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಈ ಸಾಲಿನ ಆಯವ್ಯಯದಲ್ಲಿ ಸರ್ಕಾರ ಎಷ್ಟು ಹಣವನ್ನು ನಿಗಧಿ ಮಾಡಿದೆ ?

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಹಾಕಿದರೆ ಆ ಬಗ್ಗೆ ಉತ್ತರ ಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಈ ಸಾಲಿನ ಆಯವ್ಯಯದಲ್ಲಿ ಈ ಸ್ಥಳಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹಾಗೂ ಈ ಸ್ಮಾರಕಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹಣವನ್ನು ಇಟ್ಟಿರಲೇಬೇಕಲ್ಲವೇ

ಶ್ರೀ ಜೀವರಾಜ ಆಳ್ವ —ನಾನು ಮೊದಲೇ ಹೇಳಿದ್ದೇನೆ. ಶಿವಪ್ಪನಾಯ್ಕನ ಅರಮನೆ ಮತ್ತು ಕೋಟೆಯನ್ನು ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವೃತ್ತವು ಸಂರಕ್ಷಿಸುತ್ತಿದೆ. ಹಾಗೂ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ಮಾಹಿತಿ ಇಲ್ಲ. ಅದನ್ನು ಸದಸ್ಯರಿಗೆ ನಾನು ಒದಗಿಸಿಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಇವತ್ತು ಏನು ''ನಗರ'' ಹಾಗೂ ''ಕಾಲೇದುರ್ಗ''ಗಳನ್ನು ರಾಷ್ಟ್ರೀಯ ಸ್ಮಾರಕಗಳನ್ನಾಗಿ ಮಾಡಬೇಕು.

ಶ್ರೀ ಜೀವರಾಜ ಆಳ್ವ.—ಅಲ್ಲಿ ನಾಯಕರ ಕಾಲದ ಕೆಲವು ಸ್ಮಾರಕಗಳನ್ನು ಗುರ್ತು ಮಾಡಿ ಒಂದು ತೀರ್ಮಾನ ತೆಗೆದುಕೊಂಡು ಈ ಸಾರಿ ಪುರಾತತ್ವ ಇಲಾಖೆಯ ಶತಮಾನ ವರ್ಷದ ಅಂಗವಾಗಿ ಶಿವಮೊಗ್ಗದ ಶಿವಪ್ಪನಾಯ್ಕರ ಅರಮನೆಯನ್ನು ದುರಸ್ತು ಮಾಡಲಾಗುತ್ತಿದ್ದು, ದುರಸ್ತಿಯಾದ ತಕ್ಷಣ ಅದನ್ನು ಉದ್ಘಾಟನೆ ಮಾಡಬೇಕೆಂದು ಇದ್ದೇವೆ. ಇಂತಹ ಸ್ಥಳಗಳನ್ನು ಗುರುತಿಸಿ ನಮ್ಮ ಇಲಾಖೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ''ಕಾಲೇದುರ್ಗ' ಶಿವಪ್ಪನಾಯಕನ ಅರಮನೆ ಇರುವ ಸ್ಥಳ. ಇಲ್ಲಿಗೆ ಹೆಚ್ಚು ಪ್ರವಾಸಿಗಳು ಭೇಟಿ ಕೊಡುತ್ತಿದ್ದಾರೆ. ಹಾಗೂ ನಗರದಲ್ಲಿ ಶಿವಪ್ಪನಾಯಕರ ಕೋಟೆ ಇದೆ. ಇವನ್ನೆಲ್ಲಾ ಸಂರಕ್ಷಿಸಿ ಅಭಿವೃದ್ಧಿ ಮಾಡಿದರೆ ಇವುಗಳು ರಾಷ್ಟ್ರೀಯ ಸ್ಮಾರಕಗಳಾಗುವುದರಲ್ಲಿ ಸಂದೇಹವಿಲ್ಲ. ಕಾಲೇದುರ್ಗವನ್ನು ಐತಿಹಾಸಿಕ ಸ್ಮಾರಕವೆಂದು ಉಳಿಸಿಕೊಂಡು ಅಭಿವೃದ್ಧಿ ಮಾಡಬೇಕು.

ಶ್ರೀ ಜೀವರಾಜ ಆಳ್ವ.— ಹೊಸನಗರದ ಅರಮನೆಯನ್ನು ಕೇಂದ್ರ ಪುರಾತತ್ವ ಇಲಾಖೆ ವಹಿಸಿಕೊಂಡಿದೆ. ಇನ್ನು ಕಾಲೇದುರ್ಗದ ಬಗ್ಗೆ ಏನು ಸದಸ್ಯರು ಸಲಹೆ ಕೊಟ್ಟಿದ್ದಾರೆ ಆ ಬಗ್ಗೆ ಸರ್ಕಾರ ಗಮನ ಇಟ್ಟುಕೊಳ್ಳುತ್ತದೆ.

ಗುಂಬ್ಜ ಮತ್ತು ಕೊರಟಗೆರೆಯಲ್ಲಿ ನಡೆದ ಕೊಲೆ ಹಾಗೂ ದರೋಡೆ

೭೧೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಂಬ್ಜ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ದಯೆಯಿಟ್ಟು ಉತ್ತರಿಸುವರೆ ?

(ಅ) ಗುಂಬ್ಜ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಈಗ್ಗೆ ೩ ವರ್ಷಗಳಿಂದ ನಡೆದಿರುವ ಕೊಲೆ ಹಾಗೂ ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

(ಆ) ಕೊಲೆಯಾದವರ ಪೈಕಿ ಹರಿಜನ ಗಿರಿಜನರೆಷ್ಟು,

(ಇ) ಮೇಲ್ಕಂಡ ಪ್ರಕರಣಗಳ ಬಗ್ಗೆ ಕೈಗೊಂಡಿರುವ ಶ್ರವಂಗಳೇನು ಮತ್ತು ಆ ಪೈಕಿ ಯಾವು ದಾದರೂ ಪತ್ತೆಯಾಗಿವೆಯೆ ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

(ಅ)

ಗುಂಬ್ಜ ತಾಲ್ಲೂಕು		ಕೊರಟಗೆರೆ ತಾಲ್ಲೂಕು
ಕೊಲೆ	೧೫	೧೦
ದರೋಡೆ	೭	ಇಲ್ಲ

(ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ ೧ರಲ್ಲಿ ಸೂಚಿಸಿದೆ)

(ಆ)

ಗುಂಬ್ಜ ತಾಲ್ಲೂಕು		ಕೊರಟಗೆರೆ ತಾಲ್ಲೂಕು
ಹರಿಜನ	೨	೨
ಗಿರಿಜನ	—	೧